ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156

(ನ್ಯಾಕ್ ಮಾನ್ಯತೆ B+ ಗ್ರೇಡ್ – 2021)

**RANI CHANNAMMA UNIVERSITY**

**Vidyasangama, National Highway – 04, Bhootaramanahatti, Belagavi – 591156**

**(NAAC Accredited with B+ Grade - 2021)**

**E-mail:** rcuregistrar@gmail.com registrar@rcub.sc.in

**ಕುಲಸಚಿವರ ಕಾರ್ಯಾಲಯ**

**Office of the Registrar**

**Website:** www.rcub.ac.in

**Phone No.:** 0831-2565208/19


**ಕ್ರ.ಸಂ.:** ರಾಚವಿ/ಬೆಳಗಾವಿ/ಸಿಡಿಸಿ/ 2023-24/ 05 **ದಿನಾಂಕ: 21-04-2023**

## ಅಧಿಸೂಚನೆ

**ವಿಷಯ:** 2023-24ನೇ ಶೈಕ್ಷಣಿಕ ಸಾಲಿಗಾಗಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸಗಳ ಸಂಯೋಜನೆಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸುತ್ತಿರುವ ಕುರಿತು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಯೋಜಿತ ಬೆಳಗಾವಿ ಮತ್ತು ವಿಜಯಪುರ ಜಿಲ್ಲೆಗಳಲ್ಲಿ 2023-24ನೇ ಸಾಲಿಗೆ ಹೊಸ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಲು ಇಚ್ಛಿಸುವ ಮಹಾವಿದ್ಯಾಲಯಗಳು ಸರ್ಕಾರದ ನಿಯಮಾವಳಿಯಂತೆ ನೋಂದಾಯಿಸಲ್ಪಟ್ಟ ಸಂಘ ಸಂಸ್ಥೆಗಳು/ ಸಾರ್ವಜನಿಕ ಟ್ರಸ್ಟ್‌ಗಳಿಂದ ಮತ್ತು 2022-23ನೇ ಸಾಲಿನಲ್ಲಿ ತಾತ್ಕಾಲಿಕ ಸಂಯೋಜನೆ ಹೊಂದಿರುವ ಹಾಗೂ 2022-23ನೇ ಸಾಲಿಗೆ ಶಾಶ್ವತ ಸಂಯೋಜನೆ ಕೊನೆಗೊಳ್ಳುವ ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳಿಂದ ಬಿ.ಎ./ ಬಿ.ಎಸ್ಸಿ/ ಬಿ.ಕಾಂ./ ಬಿ.ಸಿ.ಎ./ ಬಿ.ಬಿ.ಎ./ ಬಿ.ಎಸ್.ಡಬ್ಲ್ಯೂ/ ಬಿ.ಇಡಿ./ ಬಿ.ಪಿ.ಇಡಿ./ ಎಂ.ಎ./ ಎಂ.ಕಾಂ./ ಎಂ.ಎಸ್ಸಿ/ ಎಂ.ಇಡಿ./ ಎಂ.ಪಿ.ಇಡಿ./ ಎಂ.ಎಸ್.ಡಬ್ಲ್ಯೂ ಹಾಗೂ ಸರ್ಟಿಫಿಕೇಟ್ ಕೋರ್ಸ ಇನ್ ಯೋಗಾ/ ಡಿಪ್ಲೋಮಾ/ ಪಿ.ಜಿ. ಡಿಪ್ಲೋಮಾ ಸೇರಿದಂತೆ ವಿಶ್ವವಿದ್ಯಾಲಯದ ಮಾನ್ಯತೆ ಹೊಂದಿರುವ ಇತ್ಯಾದಿ ಸ್ನಾತಕ/ ಸ್ನಾತಕೋತ್ತರ ಕೋರ್ಸಗಳಿಗೆ ಮುಂದುವರಿಕೆ/ ವಿಸ್ತರಣೆ/ ಹೊಸ ಕೋರ್ಸ/ ಹೊಸ ವಿಷಯ/ ಹೊಸ ವಿಷಯಗಳ ಸಮೂಹ/ ಪ್ರವೇಶ ಮಿತಿ ಹೆಚ್ಚಳ/ ಶಾಶ್ವತ ಸಂಯೋಜನೆ/ ಶಾಶ್ವತ ಸಂಯೋಜನೆ ನವೀಕರಣ ಇತ್ಯಾದಿ ಸಂಯೋಜನೆಗಳಿಗಾಗಿ ಸಂಬಂಧಿಸಿದ ದಾಖಲೆಗಳೊಂದಿಗೆ ಸಂಬಂಧಿತ ಸಂಯೋಜನಾ ಶುಲ್ಕ ಮತ್ತು ಕ್ರೀಡಾ ಶುಲ್ಕ ರೂ.2,500/-ಗಳನ್ನು ಪ್ರತ್ಯೇಕವಾಗಿ ಪಾವತಿಸಿ, ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದಾಗಿದೆ. ಅಲ್ಲದೇ, ಸಂಶೋಧನಾ ಕೇಂದ್ರಗಳ ಮಾನ್ಯತೆ/ ಮಾನ್ಯತೆ ಮುಂದುವರಿಕೆ/ ನವೀಕರಣಕ್ಕಾಗಿ ಭೌತಿಕವಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

**ಸಂಯೋಜನೆಗೆ ಸಂಬಂಧಿಸಿದ ಸಾಮಾನ್ಯ ಸೂಚನೆಗಳು:**

1. ಸರ್ಕಾರದ ನಿಯಮಾವಳಿಯಂತೆ ನೋಂದಾಯಿಸಲ್ಪಟ್ಟ ಸಂಘ ಸಂಸ್ಥೆಗಳು/ ಸಾರ್ವಜನಿಕ ಟ್ರಸ್ಟ್‌ಗಳು ಬೆಳಗಾವಿ, ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಹೊಸ ಸ್ನಾತಕ ಮಹಾವಿದ್ಯಾಲಯ ಹಾಗೂ ಪ್ರಸ್ತುತ ಇರುವ ಮಹಾವಿದ್ಯಾಲಯಗಳಲ್ಲಿ ಹೊಸ ಸ್ನಾತಕೋತ್ತರ ಕೋರ್ಸಗಳನ್ನು ಪ್ರಾರಂಭಿಸಲು ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.
2. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ತಾತ್ಕಾಲಿಕ ಸಂಯೋಜನೆ ಪಡೆದು ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳ ಸ್ನಾತಕ/ ಸ್ನಾತಕೋತ್ತರ ಕೋರ್ಸಗಳಿಗೆ ಮುಂದುವರಿಕೆ ಮತ್ತು ವಿಸ್ತರಣೆ ಪಡೆಯಲು ಅರ್ಜಿಗಳನ್ನು ಸಲ್ಲಿಸುವುದು.

3. ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳಲ್ಲಿ ಹೊಸ ಸ್ನಾತಕ / ಸ್ನಾತಕೋತ್ತರ ಕೋರ್ಸ್/ ಹೊಸ ವಿಷಯ ಆರಂಭಿಸಲು ಹಾಗೂ ಪ್ರಸ್ತುತ ಇರುವ ಕೋರ್ಸ್‌ಗಳ ಪ್ರವೇಶ ಮಿತಿ ಹೆಚ್ಚಳಕ್ಕಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.
4. ಎಂ.ಬಿ.ಎ./ ಎಂ.ಸಿ.ಎ. ಕೋರ್ಸ್ ಪ್ರಾರಂಭಿಸುವವರು AICTE ಯವರ ಮತ್ತು ಬಿ.ಇಡಿ./ ಬಿ.ಪಿ.ಇಡಿ./ ಎಂ.ಇಡಿ./ ಎಂ.ಪಿ.ಇಡಿ. ಕೋರ್ಸ್ ಪ್ರಾರಂಭಿಸುವವರು NCTE ಮನ್ನಣೆಯನ್ನು ಕಡ್ಡಾಯವಾಗಿ ಪಡೆದುಕೊಂಡು ಅರ್ಜಿ ಸಲ್ಲಿಸಬೇಕು.
5. ಯಾವುದೇ ವಿಧದ ಸಂಯೋಜನೆಗೆ ಸಂಬಂಧಿಸಿದಂತೆ, ಮಹಾವಿದ್ಯಾಲಯಗಳು ಆನ್‌ಲೈನ್ ಮೂಲಕ ಸಲ್ಲಿಸುವ ಅರ್ಜಿಗಳಿಗೆ ಸರ್ಕಾರವು ಸೂಚಿಸಿರುವಂತೆ ಕನಿಷ್ಠ ಅಂಕಗಳು ಹಾಗೂ ಎಲ್ಲ ಮಾನದಂಡಗಳನ್ನು ಕಡ್ಡಾಯವಾಗಿ ಪೂರೈಸಬೇಕು. ಮಹಾವಿದ್ಯಾಲಯಗಳು ಆನ್‌ಲೈನ್ ಮೂಲಕ ಸಲ್ಲಿಸುವ ಅರ್ಜಿಗಳಿಗೆ ಸಂಬಂಧಿಸಿ ಸರ್ಕಾರವು ನಿಗದಿಪಡಿಸಿದ Score and Decision Criteria ಪರಿಶೀಲಿಸಲು ಸೂಚಿಸಿದೆ.
6. ಅಲ್ಲದೇ, ಈಗಾಗಲೇ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ಸಂಯೋಜನೆ ಪಡೆದಿರುವ ಮಹಾವಿದ್ಯಾಲಯಗಳು ಸರ್ಕಾರವು ನಿಗದಿಪಡಿಸಿದ Score and Decision Criteria ನಲ್ಲಿ ನಿಗದಿಪಡಿಸಿದಂತೆ, ಎಲ್ಲ 8 ಮಾನದಂಡಗಳನ್ನು ಹಾಗೂ ಸಂಯೋಜನೆ ವಿಧದ ಅನುಸಾರ ಕನಿಷ್ಠ ಅಂಕಗಳನ್ನು ಹೊಂದುವುದು ಕಡ್ಡಾಯವಾಗಿದೆ. ಇಲ್ಲದೇ ಇದ್ದಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಇಡಿ 29 ಯುಎನ್‌ಎ 2021, ಬೆಂಗಳೂರು, ದಿನಾಂಕ: 12-02-2021ರಂತೆ ಅಂತಹ ಮಹಾವಿದ್ಯಾಲಯಗಳ ಕೋರ್ಸ್‌ಗಳ ಪ್ರಥಮ ವರ್ಷ ಪ್ರವೇಶಾತಿಯನ್ನು ನಿಷಿದ್ಧಗೊಳಿಸಲಾಗುವುದು. ಅಂತಹ ಸಂದರ್ಭದಲ್ಲಿ ದ್ವಿತೀಯ ಹಾಗೂ ತೃತೀಯ ವಿದ್ಯಾರ್ಥಿಗಳು, ತಮ್ಮ ಅಂತಿಮ ಪದವಿ ತರಗತಿಗಳನ್ನು ಪೂರ್ಣಗೊಳಿಸುವವರೆಗೆ ಮಾತ್ರ ಆ ಮಹಾವಿದ್ಯಾಲಯಗಳನ್ನು ನಡೆಸಲು ಅವಕಾಶ ನೀಡಿ, ನಂತರ ಆ ಮಹಾವಿದ್ಯಾಲಯಗಳ ಸಂಯೋಜನೆಯನ್ನು ರದ್ದುಪಡಿಸಲಾಗುವುದು.
7. 2022-23ನೇ ಶೈಕ್ಷಣಿಕ ಸಾಲಿನಲ್ಲಿ ಹೊಸದಾಗಿ ಸಂಯೋಜನೆಗೊಂಡಿರುವ ಮಹಾವಿದ್ಯಾಲಯಗಳು 2023-24ನೇ ಸಾಲಿನ ಸಂಯೋಜನಾ ಶುಲ್ಕಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಭರಿಸಬೇಕಾದ ಠೇವಣಿ ಮೊತ್ತದ ಎರಡನೇ ಕಂತಿನ ಹಣವನ್ನು ಕಡ್ಡಾಯವಾಗಿ ಸಂದಾಯ ಮಾಡತಕ್ಕದ್ದು. ಹಿಂದಿನ ವರ್ಷಗಳಲ್ಲಿ ಸಂಯೋಜನೆಗೊಂಡು, ಠೇವಣಿ ಹಣ ಬಾಕಿ ಉಳಿಸಿಕೊಂಡಿರುವ ಮಹಾವಿದ್ಯಾಲಯಗಳು ಬಾಕಿ ಠೇವಣಿ ಹಣವನ್ನು ಕಡ್ಡಾಯವಾಗಿ ಸಂದಾಯ ಮಾಡತಕ್ಕದ್ದು. ಇಲ್ಲವಾದಲ್ಲಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲಾಗುವುದು.
8. ಮಹಾವಿದ್ಯಾಲಯಗಳ ಹೆಸರು ಬದಲಾವಣೆ, ಆಡಳಿತ ಮಂಡಳಿಗಳ ಬದಲಾವಣೆ, ಮಹಾವಿದ್ಯಾಲಯ/ ಕೋರ್ಸ್‌ಗಳನ್ನು ಸ್ಥಗಿತಗೊಳಿಸುವುದು, ಮಹಾವಿದ್ಯಾಲಯದ ಸ್ಥಳಾಂತರದ ಅರ್ಜಿಗಳನ್ನು ಆನ್‌ಲೈನ್ ಮೂಲಕವೇ ಸಲ್ಲಿಸುವುದು.
9. ಸದರಿ ಸಂಯೋಜನಾ ಅಧಿಸೂಚನೆ ಹಾಗೂ ಇದರಲ್ಲಿನ ಸೂಚನೆಗಳು, ಮಾರ್ಗಸೂಚಿಗಳು, ನಿಯಮಾವಳಿಗಳಲ್ಲಿ ಮುದ್ರಣ ದೋಷಗಳುಂಟಾಗಿದ್ದಲ್ಲಿ ಅಥವಾ ಅರ್ಥೈಸುವಲ್ಲಿ ವ್ಯತ್ಯಾಸಗಳಾಗಿದ್ದರೆ, ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ ಹಾಗೂ ಸರ್ಕಾರದ ಆದೇಶಗಳಂತೆ ಯಾವುದೇ ಮುನ್ಸೂಚನೆ ನೀಡದೇ ಯಾವುದೇ ಹಂತದಲ್ಲಿ ತಿದ್ದುಪಡಿಗಳಿಗೆ ಒಳಗಾಗುವ ಷರತ್ತಿಗೆ ಒಳಪಟ್ಟಿರುತ್ತವೆ.

## ಸೂಚನೆಗಳು

1. ಕರ್ನಾಟಕ ಸರ್ಕಾರದ ಸಂಯೋಜನೆಗೆ ಸಂಬಂಧಿತ ವೆಬ್‌ಸೈಟ್ ವಿಳಾಸ: http://uucms.karnataka.gov.in ರ ಮೂಲಕ ಸಂಬಂಧಿಸಿದ ಎಲ್ಲ ದಾಖಲೆಗಳೊಂದಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸುವುದು. ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಯನ್ನು ದ್ವಿಪ್ರತಿಯಲ್ಲಿ ಮುದ್ರಣ ಪಡೆದು, ಅದಕ್ಕೆ ದೃಢೀಕೃತ ಪೂರಕ ದಾಖಲೆಗಳನ್ನು ಹಾಗೂ ಆನ್‌ಲೈನ್ ಮೂಲಕ ಭರಿಸಿದ್ದರ ಶುಲ್ಕದ ಪ್ರತಿ ಮತ್ತು ವಿಶ್ವವಿದ್ಯಾಲಯದ ವೆಬ್‌ಸೈಟ್ ವಿಳಾಸ: www.rcub.ac.in ದಲ್ಲಿ CDC Link ನಲ್ಲಿರುವ Affiliation Notification 2023-24 ನಲ್ಲಿರುವ ಮಹಾವಿದ್ಯಾಲಯದ ವಿವರದ ನಮೂನೆಯಲ್ಲಿ ಎಲ್ಲಾ ವಿವರಗಳನ್ನು ನಮೂದಿಸಿ, ಮಹಾವಿದ್ಯಾಲಯದವರು 2023-24ನೇ ಸಾಲಿಗೆ ತಾವು ಕೋರುವ ಸಂಯೋಜನೆ ವಿವರಗಳನ್ನು ಒಳಗೊಂಡ ಅನುಬಂಧ 01 ರಿಂದ 09ರಲ್ಲಿ ಅನ್ವಯಿಸುವ ಅನುಬಂಧಗಳು ಹಾಗೂ ಲಗತ್ತಿಸಬೇಕಾಗದ ದಾಖಲೆಗಳ ಪಟ್ಟಿ (Check List) ಯಲ್ಲಿನ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಲಗತ್ತಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಂಡು ಬೈಂಡಿಂಗ್ ಮಾಡಿಸಿ, 2 ಪ್ರತಿಗಳನ್ನು ನಿಗದಿತ ದಿನಾಂಕದೊಳಗಾಗಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಮಂಡಳಿ ವಿಭಾಗಕ್ಕೆ ಸಲ್ಲಿಸುವುದು. ಒಂದು ವೇಳೆ ಅರ್ಜಿಯಲ್ಲಿ ಹಾಗೂ ಮಹಾವಿದ್ಯಾಲಯದವರು ಒದಗಿಸುವ ವಿವರಗಳ ನಮೂನೆಯಲ್ಲಿ ಸರಿಯಾಗಿ/ ಸ್ಪಷ್ಟವಾಗಿ ಮಾಹಿತಿ ಒದಗಿಸದೇ ಇದ್ದಲ್ಲಿ, ಅಪೂರ್ಣವಾದ ಹಾಗೂ ಸೂಕ್ತ ದೃಢಿಕೃತ ದಾಖಲೆಗಳಿಲ್ಲದೇ ಇದ್ದಲ್ಲಿ ಅದರಿಂದ ಉಂಟಾಗುವ ಗೊಂದಲ/ ಸಮಸ್ಯೆಗಳಿಗೆ ಮಹಾವಿದ್ಯಾಲಯದವರೇ ಹೊಣೆಗಾರರಾಗಿರುತ್ತಾರೆ.
2. ಸಂಯೋಜನೆಗಾಗಿ ಭರಿಸಿದ ಎಲ್ಲ ಶುಲ್ಕಗಳ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸುವುದು. ಒಂದು ವೇಳೆ ನಿಗದಿತ ದಿನಾಂಕದ ಒಳಗಾಗಿ ಸಂಯೋಜನೆಗಾಗಿ ಭರಿಸಬೇಕಾದ ಶುಲ್ಕಗಳ ಪ್ರತಿಯನ್ನು ತಮ್ಮಲ್ಲಿಯೇ ಇಟ್ಟುಕೊಂಡು, ನಿಗದಿತ ದಿನಾಂಕದ ನಂತರ ಅರ್ಜಿಗಳೊಂದಿಗೆ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
3. ಸಂಯೋಜನೆಯ ಶುಲ್ಕದ ಜೊತೆಗೆ ವಿಶ್ವವಿದ್ಯಾಲಯದ ಕ್ರೀಡಾ ವಿಭಾಗಕ್ಕೆ ಸಂಬಂಧಿಸಿದ ವಿಶ್ವವಿದ್ಯಾಲಯದ ಅಧೀನದಲ್ಲಿರುವ ಅಂತರ ಮಹಾವಿದ್ಯಾಲಯಗಳ ಅಥ್ಲೇಟಿಕ್ ಕ್ರೀಡಾ ಕೂಟವನ್ನು ಸಂಘಟಿಸಲು, ಮಹಾವಿದ್ಯಾಲಯದವರು ವರ್ಷಕ್ಕೆ Initial Contribution For Athletic Meet ರೂ.2500/- ಗಳನ್ನು ಹಣಕಾಸು ಅಧಿಕಾರಿಗಳು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರ ಹೆಸರಿನಲ್ಲಿರುವ ಜನರಲ್ (ಸಾಮಾನ್ಯ) ಖಾತೆ ಸಂಖ್ಯೆ: 05522200016658 ಗೆ (IFSC No. CNRB0010552) ಲೆಕ್ಕ ಶಿರ್ಷಿಕೆ ಸಂಖ್ಯೆ: 205 ರಲ್ಲಿ ಚಲನ್ ಮೂಲಕ ಪ್ರತ್ಯೇಕವಾಗಿ ಭರಿಸಬೇಕು. ಅಥವಾ ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಹೆಸರಿನಲ್ಲಿ ಪ್ರತ್ಯೇಕ ಡಿ.ಡಿ. ಪಡೆಯಬೇಕು. ಸದರಿ ಶುಲ್ಕ ಭರಿಸಿದ್ದರ ಬಗ್ಗೆ ರಾ.ಚ.ವಿ.ಯ ಹಣಕಾಸು ವಿಭಾಗದಿಂದ ಪಡೆದ ರಸೀದಿಯನ್ನು ಪ್ರತ್ಯೇಕ ಪತ್ರದೊಂದಿಗೆ (Covering Letter) ಲಗತ್ತಿಸಿ, ಸಂಯೋಜನಾ ಅರ್ಜಿಯೊಂದಿಗೆ ಕಾಲೇಜು ಅಭಿವೃದ್ಧಿ ಮಂಡಳಿಗೆ ಸಲ್ಲಿಸಬೇಕು.
4. ಕರ್ನಾಟಕ ರಾಜ್ಯ ಸರ್ಕಾರದ ಆದೇಶ ಸಂಖ್ಯೆ: ಇಡಿ 21 ಯುಬಿವಿ 2004, ದಿನಾಂಕ: 15-05-2004ರನ್ವಯ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಯವರು ನಡೆಸುವ ಮಹಾವಿದ್ಯಾಲಯಗಳಿಗೆ ಸಂಯೋಜನಾ ಶುಲ್ಕದಲ್ಲಿ ಮಾತ್ರ 50%ರಷ್ಟು ವಿನಾಯತಿ ನೀಡಲಾಗಿದೆ. ಸದರಿ ವಿನಾಯತಿ ಪಡೆಯಲು, ಆಡಳಿತ ಮಂಡಳಿಯು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಕ್ಕೆ ಸೇರಿದ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ಪತ್ರ ಅಥವಾ ದೃಢೀಕೃತ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಇಲ್ಲದಿದ್ದಲ್ಲಿ ಅಂತಹ ಆಡಳಿತ ಮಂಡಳಿಯ/ ಮಹಾವಿದ್ಯಾಲಯಗಳಿಗೆ 50% ರಷ್ಟು ಶುಲ್ಕ ವಿನಾಯತಿ ನೀಡಲಾಗುವುದಿಲ್ಲ.
5. ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳ ಹೆಸರುಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ಕರ್ನಾಟಕ ಸರ್ಕಾರದ ಮಂಜೂರಾತಿ ಪತ್ರ ಮತ್ತು ವಿಶ್ವವಿದ್ಯಾಲಯ ನೀಡಿರುವ ಅಧಿಸೂಚನೆಗಳಲ್ಲಿರುವಂತೆಯೇ ಇದೆ ಎಂಬುದರ ಬಗ್ಗೆ

ಪರಿಶೀಲಿಸಿಕೊಳ್ಳುವುದು. ಒಂದು ವೇಳೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ಮಹಾವಿದ್ಯಾಲಯದ ಹೆಸರಿನಲ್ಲಿ ವ್ಯತ್ಯಾಸಗಳಿದ್ದಲ್ಲಿ ಕೂಡಲೇ ಕಾಲೇಜು ಅಭಿವೃದ್ಧಿ ಮಂಡಳಿಯ ಗಮನಕ್ಕೆ ತಂದು, ಸಂಯೋಜನಾ ಅರ್ಜಿ ಸಲ್ಲಿಸುವ ಕಾರ್ಯದಲ್ಲಿ ತೊಡಗಿಕೊಳ್ಳತಕ್ಕದ್ದು. ಮಹಾವಿದ್ಯಾಲಯದವರು ಸಂಯೋಜನಾ ಅರ್ಜಿಯೊಂದಿಗೆ ಒದಗಿಸಬೇಕಾದ ಮಹಾವಿದ್ಯಾಲಯದ ಮಾಹಿತಿ ನಮೂನೆಯಲ್ಲಿಯೂ ಕರ್ನಾಟಕ ಸರ್ಕಾರದ ಮಂಜೂರಾತಿ ಪತ್ರ, ಮತ್ತು ವಿಶ್ವವಿದ್ಯಾಲಯ ನೀಡಿರುವ ಅಧಿಸೂಚನೆಗಳಲ್ಲಿರುವಂತೆಯೇ ಹೆಸರನ್ನು ನಮೂದಿಸತಕ್ಕದ್ದು.

6. 2021-22ನೇ ಸಾಲಿನ DCF ಫೈಲನ್ನು AISHE ವೆಬ್‌ಸೈಟ್ (www.aishe.ac.nic.in) ಗೆ ಅಪ್‌ಲೋಡ್ ಮಾಡಿದ ಪ್ರಮಾಣ ಪತ್ರ ಕಡ್ಡಾಯವಾಗಿ ಲಗತ್ತಿಸುವುದು.
7. ಯು.ಜಿ.ಸಿ., ಕರ್ನಾಟಕ ಸರ್ಕಾರ ಹಾಗೂ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆ, ಆದೇಶ, ಅಧಿಸೂಚನೆ, ಅಧಿನಿಯಮ(Act), ಪರಿನಿಯಮ (Statute), ನಿಯಮ ಮತ್ತು ನಿಬಂಧನೆ (Rules and Regulation) ಆಧ್ಯಾದೇಶ (Ordinance), ಮತ್ತು ನಿರ್ದೇಶನಗಳಿಗೆ ಬದ್ಧರಾಗಿರುವ ಹಾಗೂ ರಾ.ಚ.ವಿ. ನಿಯಮಾವಳಿಗಳ ಪ್ರಕಾರ ತುಂಬಬೇಕಾದ ಎಲ್ಲ ರೀತಿಯ ಶುಲ್ಕಗಳನ್ನು ಭರಿಸಲು ಒಪ್ಪಿಗೆಯಿರುವ ಬಗ್ಗೆ ಹಾಗೂ ರಾಜ್ಯಸರ್ಕಾರ ಮತ್ತು ವಿಶ್ವವಿದ್ಯಾನಿಲಯದ ಪೂರ್ವಾನುಮೋದನೆ ಇಲ್ಲದೆ ವ್ಯವಸ್ಥಾಪನೆಯಲ್ಲಿ ಯಾವುದೇ ವರ್ಗಾವಣೆ ಅಥವಾ ಕಾಲೇಜಿನ ಹೆಸರಿನಲ್ಲಿ ಅಥವಾ ಕಾರ್ಯರೀತಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲವೆಂಬ ಬಗ್ಗೆ ರೂ.20/-ಗಳ ಛಾಪಾ ಕಾಗದ ಮೇಲೆ ಮುಚ್ಚಳಿಕೆ ಪತ್ರ (Execution of bond) ವನ್ನು ಅರ್ಜಿಯೊಡನೆ ಕಡ್ಡಾಯವಾಗಿ ಲಗತ್ತಿಸಿರಬೇಕು.
8. ಹೊಸದಾಗಿ ಆರಂಭಿಸಲಾಗುವ ಮಹಾವಿದ್ಯಾಲಯಗಳಾಗಲೀ ಅಥವಾ ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯಗಳಾಗಲೀ ಸರ್ಕಾರ ಹಾಗೂ ವಿಶ್ವವಿದ್ಯಾಲಯ ನಿಗದಿಪಡಿಸಿರುವ ಪ್ರವೇಶಕ್ಕಿಂತ ಹೆಚ್ಚಿಗೆ ಪ್ರವೇಶವನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000 ರ ಪ್ರಕರಣ 60ರಂತೆ ತೆಗೆದುಕೊಳ್ಳುವಂತಿಲ್ಲ. ಒಂದು ವೇಳೆ ಹೆಚ್ಚುವರಿಯಾಗಿ ಪ್ರವೇಶ ಪಡೆದ ಯಾವುದೇ ಒಬ್ಬ ವಿದ್ಯಾರ್ಥಿಯು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000 ರ ಪ್ರಕರಣ 61ರಂತೆ ಮಹಾವಿದ್ಯಾಲಯ/ ವಿಶ್ವವಿದ್ಯಾಲಯ ನಡೆಸುವ ಪರೀಕ್ಷೆಗಳಿಗೆ ಹಾಜರಾಗಲು ಅರ್ಹನಾಗಿರುವುದಿಲ್ಲ. ಒಂದು ವೇಳೆ ಹೆಚ್ಚುವರಿ ಪ್ರವೇಶ ತೆಗೆದುಕೊಂಡಲ್ಲಿ ಮುಂದಾಗುವ ಆಗು-ಹೋಗುಗಳಿಗೆ ಮಹಾವಿದ್ಯಾಲಯವೇ ಜವಾಬ್ದಾರಿಯಾಗಿರುತ್ತದೆ.
9. **ಠೇವಣಿ ಹಣ:** ಯಾವುದೇ ಸಂಘ/ ಸಂಸ್ಥೆಯವರು ಹೊಸ ಮಹಾವಿದ್ಯಾಲಯವನ್ನು/ ಕೋರ್ಸ ಪ್ರಾರಂಭಿಸಬೇಕೆಂದು ಇಚ್ಛಿಸಿ ಸಲ್ಲಿಸಿದ ಅರ್ಜಿಗೆ ವಿಶ್ವವಿದ್ಯಾಲಯದ ವಿವಿಧ ಪ್ರಾಧಿಕಾರಗಳ ಅನುಮೋದನೆ ನೀಡಿದ್ದಲ್ಲಿ, ಸದರಿ ಪ್ರಸ್ತಾವನೆಯನ್ನು ಸಿದ್ಧಪಡಿಸಿ, ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸಲಾಗುವುದು. ಹೀಗೆ ಸಲ್ಲಿಸಿದ ಪ್ರಸ್ತಾವನೆಗೆ ಸಂಬಂಧಿಸಿ, ಸರ್ಕಾರವು ಆದೇಶ ನೀಡಿದ ನಂತರ ಮಹಾವಿದ್ಯಾಲಯದವರು ತನಿಖಾ ಸಮಿತಿಯವರು ವಿಧಿಸಿರುವ ಷರತ್ತುಗಳನ್ನು ಪಾಲಿಸಿರುವ ಬಗ್ಗೆ ಸೂಕ್ತ ದಾಖಲೆಗಳನ್ನು ಹಾಗೂ ವಿಶ್ವವಿದ್ಯಾಲಯದಿಂದ ನಿಗದಿಪಡಿಸಿದ ಠೇವಣಿ ಮೊತ್ತವನ್ನು ಕಡ್ಡಾಯವಾಗಿ ಭರಿಸಬೇಕಾಗುತ್ತದೆ. ಹೊಸ ಮಹಾವಿದ್ಯಾಲಯ/ ಕೋರ್ಸ ಪ್ರಾರಂಭಿಸುವವರು ವಿಶ್ವವಿದ್ಯಾಲಯ ನಿಗದಿಪಡಿಸಿದ ಠೇವಣಿ ಹಣವನ್ನು ಎರಡು ಕಂತುಗಳಲ್ಲಿ ಭರಿಸಲು ಸೂಚಿಸಲಾಗಿದೆ. ಅಂದರೆ ಪ್ರಾರಂಭದಲ್ಲಿ ಒಟ್ಟು ಮೊತ್ತದ ಅರ್ಧದಷ್ಟು ಕಡ್ಡಾಯವಾಗಿ ಭರಿಸಿ ಉಳಿದ ಮೊತ್ತವನ್ನು ಮುಂದಿನ ಶೈಕ್ಷಣಿಕ ವರ್ಷದ ಸಂಯೋಜನಾ ಮುಂದುವರಿಕೆ/ ವಿಸ್ತರಣೆ ಸಮಯದಲ್ಲಿ ಅರ್ಜಿಯೊಂದಿಗೆ ಭರಿಸಬೇಕಾಗುತ್ತದೆ.

   ಮುಂದುವರೆದು, ಒಂದು ವೇಳೆ ನಿಗದಿತ ಸಮಯದಲ್ಲಿ ಭರಿಸದೇ ಇದ್ದಲ್ಲಿ ವಿಶ್ವವಿದ್ಯಾಲಯವು ನಿಗದಿಪಡಿಸಿದ ಸಮಯದ ನಂತರದ ಅವಧಿಗೆ ಪ್ರತಿ ವರ್ಷಕ್ಕೆ 10% ರಷ್ಟು ದಂಡ ಶುಲ್ಕವನ್ನು ಭರಿಸಬೇಕಾಗುತ್ತದೆ. ಸದರಿ ದಂಡ ಶುಲ್ಕವನ್ನು ಮುಂದಿನ 2 ವರ್ಷಗಳ ಒಳಗಾಗಿ ಭರಿಸುವುದು ಕಡ್ಡಾಯವಾಗಿದೆ. ಒಂದು ವೇಳೆ ಹೊಸ ಮಹಾವಿದ್ಯಾಲಯ /ಕೋರ್ಸ ಪ್ರಾರಂಭಿಸುವುದಾಗಿನಿಂದ ಒಟ್ಟು 3 ವರ್ಷಗಳ ಅವಧಿಯ ಒಳಗಡೆ ಸಂಯೋಜನಾ ಠೇವಣಿಯ 2ನೇ ಕಂತಿನ ಮೊತ್ತವನ್ನು ಭರಿಸದೇ ಹೋದಲ್ಲಿ ವಿಶ್ವವಿದ್ಯಾಲಯವು ನಿಯಮಾನುಸಾರ ಕ್ರಮ

ಜರುಗಿಸಬಹುದಾಗಿದೆ. ಸರ್ಕಾರಿ ಮಹಾವಿದ್ಯಾಲಯಗಳನ್ನು ಹೊರತುಪಡಿಸಿ, ಇತರೆ ಯಾವುದೇ ಮಹಾವಿದ್ಯಾಲಯದವರಿಗೆ ಠೇವಣಿ ಭರಿಸುವುದರಿಂದ ಯಾವುದೇ ರೀತಿಯ ರಿಯಾಯತಿ/ ವಿನಾಯತಿ ಇರುವುದಿಲ್ಲ.

10. ಮಹಾವಿದ್ಯಾಲಯವು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000ದ ಯಾವುದೇ ಉಪಬಂಧಗಳನ್ನು ಅಥವಾ ಸಂಯೋಜನೆಯ ಯಾವುದೇ ಷರತ್ತುಗಳನ್ನು ಪಾಲಿಸಲು ವಿಫಲಗೊಂಡರೆ ಅಥವಾ ಮಹಾವಿದ್ಯಾಲಯವನ್ನು ಶಿಕ್ಷಣದ ಹಿತಾಸಕ್ತಿಗಳಿಗೆ ಪ್ರತಿಕೂಲವಾಗುವ ರೀತಿಯಲ್ಲಿ ನಡೆಸಿಕೊಂಡು ಬರುತ್ತಿದ್ದರೆ, ಅಂಥಹ ಮಹಾವಿದ್ಯಾಲಯದ ಸಂಯೋಜನೆಯನ್ನು ವಿಶ್ವವಿದ್ಯಾಲಯವು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000ರ ಉಪಪ್ರಕರಣ 63ರಂತೆ ಹಿಂತೆಗೆದುಕೊಂಡಲ್ಲಿ ಅಥವಾ ಮಹಾವಿದ್ಯಾಲಯ/ ಸಂಸ್ಥೆಯವರು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000ರ ಉಪಪ್ರಕರಣ 65ರ ಪ್ರಕಾರ ಸ್ವ-ಇಚ್ಛೆಯಿಂದ ಕೋರ್ಸ/ ಮಹಾವಿದ್ಯಾಲಯವನ್ನು ಸ್ಥಗಿತಗೊಳಿಸಲು ಪ್ರಕ್ರಿಯಾ ಶುಲ್ಕ ರೂ.10,000/-ಗಳನ್ನು ಭರಿಸಿ, ಮನವಿ ಮಾಡಿಕೊಂಡಲ್ಲಿ, ಮಹಾವಿದ್ಯಾಲಯವು ಸ್ಥಗಿತಗೊಳಿಸಲು ಇಚ್ಛಿಸುವ ಕೋರ್ಸಗಳಿಗೆ ಸಂಬಂಧಿಸಿ, ವಿಶ್ವವಿದ್ಯಾಲಯದಲ್ಲಿ ಇಟ್ಟಿರುವ ಒಟ್ಟು ಠೇವಣಿಯಲ್ಲಿ ಇಡಬೇಕಾದ ಒಟ್ಟು ಠೇವಣಿ ಮೊತ್ತದ 20% ರಷ್ಟನ್ನು ಸಂಸ್ಕರಣಾ ಶುಲ್ಕವೆಂದು (Processing Fees) ಕಡಿತಗೊಳಿಸಿ ಉಳಿದ ಹಣವನ್ನು ಮರಳಿಸಲಾಗುವುದು. ಒಂದು ವೇಳೆ ವಿಶ್ವವಿದ್ಯಾಲಯದ ಬೇರೆ-ಬೇರೆ ವಿಭಾಗಗಳಲ್ಲಿ ಭರಿಸಬೇಕಾದ ಶುಲ್ಕಗಳನ್ನು ಮಹಾವಿದ್ಯಾಲಯವು ಬಾಕಿ ಉಳಿಸಿಕೊಂಡ ಪಕ್ಷದಲ್ಲಿ ಅಂತಹ ಮೊತ್ತವನ್ನು ಸಹ ಠೇವಣಿ ಮೊತ್ತದಲ್ಲಿ ಕಡಿತಗೊಳಿಸಿ ಉಳಿದ ಹಣವನ್ನು ಮರಳಿಸಲಾಗುವುದು.

11. ಮಹಾವಿದ್ಯಾಲಯದವರು ನಿಗದಿತ ಶುಲ್ಕದೊಂದಿಗೆ ಸಂಯೋಜನಾ ಅರ್ಜಿಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ನಂತರ ಮತ್ತು ವಿಶ್ವವಿದ್ಯಾಲಯದ ತನಿಖಾ ಸಮಿತಿಯು ಪರಿಶೀಲನಾ ವೇಳಾಪಟ್ಟಿಯನ್ನು ಸಿದ್ಧಪಡಿಸುವ ಪೂರ್ವದಲ್ಲಿ ತಾವು ಸಲ್ಲಿಸಿದ ಸಂಯೋಜನಾ ಅರ್ಜಿಯನ್ನು ಹಿಂಪಡೆಯಲು ಪತ್ರ ಮುಖೇನ ಅಧಿಕೃತವಾಗಿ ಮನವಿ ಮಾಡಿಕೊಂಡಲ್ಲಿ, ತಾವು ಭರಿಸಿದ ಶುಲ್ಕದಲ್ಲಿ 25% ಪ್ರಕ್ರಿಯಾ ಮೊತ್ತ ಕಡಿತಗೊಳಿಸಿ, ಇನ್ನುಳಿದ 75% ರಷ್ಟು ಹಣವನ್ನು ಮಾತ್ರ ಮರಳಿ ಕೊಡಲಾಗುವುದು. ಒಂದು ವೇಳೆ ತನಿಖಾ ಸಮಿತಿಯು ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ವಿಶ್ವವಿದ್ಯಾಲಯಕ್ಕೆ ವರದಿ ಸಲ್ಲಿಸಿದಲ್ಲಿ ಯಾವುದೇ ಶುಲ್ಕವನ್ನು ಮರಳಿ ನೀಡಲಾಗುವುದಿಲ್ಲ.

12. ಮುಂದುವರೆದು, ಕಣ್ತಪ್ಪಿನಿಂದ ಹೆಚ್ಚುವರಿಯಾಗಿ ಭರಿಸಿರುವ ಮೊತ್ತವನ್ನು ಯಾವುದೇ ಕಾರಣಕ್ಕೂ ಮರಳಿಸಲಾಗುವುದಿಲ್ಲ. ಅಲ್ಲದೇ, ಕಣ್ತಪ್ಪಿನಿಂದ ಒಂದು ಕೋರ್ಸಗೆ ಭರಿಸಬೇಕಾದ ಮೊತ್ತವನ್ನು ಮತ್ತೊಂದು ಕೋರ್ಸಗೆ ಭರಿಸಿದಲ್ಲಿ ಅಂತಹ ಮೊತ್ತವನ್ನು ಪರಸ್ಪರ ಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ.

13. ಸರ್ಕಾರಿ ಮಹಾವಿದ್ಯಾಲಯದವರು, ಹೊಸದಾಗಿ ಕೋರ್ಸ, ವಿಷಯಗಳ ಸಮೂಹ, ಇತ್ಯಾದಿ ಹೊಸ ಸಂಯೋಜನೆಗಳಿಗಾಗಿ ವಿಶ್ವವಿದ್ಯಾಲಯಕ್ಕೆ ಅರ್ಜಿ ಸಲ್ಲಿಸುವ ಪೂರ್ವದಲ್ಲಿ, ಆರಂಭಿಸಲು ಇಚ್ಛಿಸಿರುವ ಶೈಕ್ಷಣಿಕ ಸಾಲಿಗೆ ಅವಶ್ಯಕವಿರುವ ಹೊಸ ಸಂಯೋಜನೆಗಳ ಮಾಹಿತಿ, ಅವುಗಳ ಅಗತ್ಯತೆ ಮತ್ತು ಮಹಾವಿದ್ಯಾಲಯದಲ್ಲಿ ಹೊಸ ಸಂಯೋಜನೆಗಳಿಗೆ ಲಭ್ಯವಿರುವ ಶೈಕ್ಷಣಿಕ ಹಾಗೂ ಮೂಲಭೂತ ಸೌಲಭ್ಯಗಳ ಮಾಹಿತಿಯನ್ನು ಕಾಲೇಜು ಶಿಕ್ಷಣ ಆಯುಕ್ತರ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, ಅನುಮೋದನೆ ಪಡೆದ ನಂತರವಷ್ಟೇ ವಿಶ್ವವಿದ್ಯಾಲಯಕ್ಕೆ ಹೊಸ ಸಂಯೋಜನೆಗಳಿಗಾಗಿ ಅರ್ಜಿಗಳನ್ನು ಸಲ್ಲಿಸುವುದು. ಹೀಗೆ ಅರ್ಜಿ ಸಲ್ಲಿಸುವಾಗ ಕಾಲೇಜು ಶಿಕ್ಷಣ ಆಯುಕ್ತರ ಮೂಲಕ ಸರ್ಕಾರಕ್ಕೆ ತಾವು ಸಲ್ಲಿಸಿದ ಮನವಿ ಪತ್ರ ಹಾಗೂ ಸರ್ಕಾರವು ನೀಡಿರುವ ಅನುಮೋದನೆ ಪತ್ರದ ಪ್ರತಿಗಳನ್ನು ಅರ್ಜಿಯೊಂದಿಗೆ ವಿಶ್ವವಿದ್ಯಾಲಯಕ್ಕೆ ಕಡ್ಡಾಯವಾಗಿ ಸಲ್ಲಿಸುವುದು.

14. ಹೀಗೆ ಮಹಾವಿದ್ಯಾಲಯಗಳಿಂದ ಸಲ್ಲಿಸಲಾಗುವ ಸಂಯೋಜನಾ ಅರ್ಜಿಗಳು ಸರಿಯಾಗಿ ಭರ್ತಿ ಮಾಡಿರುವ, ಸಂಬಂಧಿಸಿದ ದಾಖಲೆಗಳನ್ನು ಲಗತ್ತಿಸಿರುವ ಬಗ್ಗೆ ಪರಿಶೀಲಿಸಿ, ಸ್ವೀಕರಿಸಲಾಗುವುದು. ಅಪೂರ್ಣ ಮಾಹಿತಿ/ ದಾಖಲೆಗಳನ್ನು ಒಳಗೊಂಡ ಅರ್ಜಿಗಳನ್ನು ಸ್ವಿಕರಿಸಲಾಗುವುದಿಲ್ಲ. ಹೀಗೆ ತಿರಸ್ಕರಿಸಲಾದ ಅರ್ಜಿಗಳನ್ನು ಸರಿಪಡಿಸಿ

ನಿಗದಿತ ದಿನಾಂಕದ ಒಳಗೆ ಸಂಬಂಧಿಸಿದ ಶುಲ್ಕಗಳೊಂದಿಗೆ ಮರು ಸಲ್ಲಿಸದೇ ಇದ್ದಲ್ಲಿ ವಿಶ್ವವಿದ್ಯಾಲಯ ನಿಗದಿಪಡಿಸಿದ ದಂಡಗಳೊಂದಿಗೆ ಅರ್ಜಿ ಸಲ್ಲಿಸಬೇಕಾಗುತ್ತದೆ.

15. ವಿಶ್ವವಿದ್ಯಾಲಯ ಪಠ್ಯಕ್ರಮ ರಚಿಸಿರುವ ಕೋರ್ಸ್/ ವಿಷಯಗಳಿಗೆ ಸಂಯೋಜನೆಗೆ ಅರ್ಜಿ ಸಲ್ಲಿಸುವ ಮಹಾವಿದ್ಯಾಲಯದವರು ಮಾತ್ರ ಸಂಯೋಜನೆ ಪಡೆಯುವುದಕ್ಕಾಗಿ ಅರ್ಜಿ ಸಲ್ಲಿಸಬೇಕು.
16. ಪ್ರಸ್ತುತ ವರ್ಷ ಪ್ರಾರಂಭಿಸಬೇಕಾದ ಮಂಜೂರಾತಿಯಾದ ಮಹಾವಿದ್ಯಾಲಯವನ್ನು ಆಡಳಿತಾತ್ಮಕ ಕಾರಣಗಳಿಂದಾಗಿ ಸಂಸ್ಥೆಯವರೇ ಮುಂದಿನ ವರ್ಷ ಪ್ರಾರಂಭಿಸುವುದಾಗಿ ಕೇಳಿಕೊಂಡಲ್ಲಿ ಅಥವಾ ಹೊಸ ಸಂಯೋಜನೆ ಮಂಜೂರಾತಿಯು ತಾಂತ್ರಿಕ ಕಾರಣಗಳಿಂದಾಗಿ ಸರ್ಕಾರದ ಮಟ್ಟದಲ್ಲಿ ವಿಳಂಬವಾದಲ್ಲಿ ಸಂಬಂಧಪಟ್ಟ ಸಂಸ್ಥೆಯವರು/ ಮಹಾವಿದ್ಯಾಲಯದವರು ವಿಶ್ವವಿದ್ಯಾಲಯದ ಸಂಯೋಜನೆಗೆ ಸಂಬಂಧಿಸಿದ ಇತರೆ ಶುಲ್ಕಗಳೊಂದಿಗೆ ಕೋರ್ಸಿನ ಮುಂದುವರಿಕೆ/ ವಿಸ್ತರಣೆ ಶುಲ್ಕಗಳನ್ನು ಯಥಾವತ್ತಾಗಿ ನಿಗದಿಯಂತೆ ಭರಿಸಬೇಕಾಗುತ್ತದೆ.
17. ಸ್ಥಳೀಯ ತನಿಖಾ ಸಮಿತಿಯು ಮಹಾವಿದ್ಯಾಲಯಗಳಲ್ಲಿ ಮೂಲಭೂತ ಹಾಗೂ ಶೈಕ್ಷಣಿಕ ಸೌಲಭ್ಯಗಳ ಕೊರತೆಗಳನ್ನು ಮನಗಂಡು, ಸುಧಾರಿಸಿಕೊಳ್ಳಲು ಷರತ್ತುಗಳನ್ನು ವಿಧಿಸಿ, ಸದರಿ ಷರತ್ತುಗಳನ್ನು ಪಾಲಿಸಿರುವ ಬಗ್ಗೆ ಮರುಪರಿಶೀಲನೆಗೆ ಶಿಫಾರಸ್ಸು ಮಾಡಿ ವರದಿ ಸಲಿಸಿದ್ದಲ್ಲಿ ಅಂತಹ ಮಹಾವಿದ್ಯಾಲಯ/ ಆಡಳಿತ ಮಂಡಳಿಯವರು ವಿಶ್ವವಿದ್ಯಾಲಯ ನಿಗದಿಪಡಿಸಿದ ಅವಧಿಯೊಳಗೆ ಮರುಪರಿಶೀಲನೆಗೆ ನಿಗದಿಪಡಿಸಿದ ಶುಲ್ಕವನ್ನು ಚಲನ್/ಡಿ.ಡಿ. ಯೊಂದಿಗೆ ಭರಿಸಿ, ಸ್ಥಳಿಯ ತನಿಖಾ ಸಮಿತಿಯವರು ವಿಧಿಸಿರುವ ಷರತ್ತುಗಳನ್ನು ಪೂರೈಸಿದ ಕುರಿತಾಗಿ ದಾಖಲೆಗಳೊಂದಿಗೆ ಅನುಪಾಲನಾ ವರದಿಯನ್ನು ನಿಗದಿಪಡಿಸಿದ ಅವಧಿಯ ಒಳಗಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸತಕ್ಕದ್ದು. ಒಂದು ವೇಳೆ ವಿಶ್ವವಿದ್ಯಾಲಯದ ನಿರ್ದೇಶನವನ್ನು ನಿಗದಿತ ಅವಧಿಯಲ್ಲಿ ಪಾಲಿಸಲು ಮಹಾವಿದ್ಯಾಲಯ/ ಆಡಳಿತ ಮಂಡಳಿಯವರು ವಿಫಲವಾದಲ್ಲಿ ಅಂತಹ ಮಹಾವಿದ್ಯಾಲಯಗಳ/ ಆಡಳಿತ ಮಂಡಳಿಯವರು ಸಂಬಂಧಿಸಿದ ಸಂಯೋಜನೆಗೆ ಆಸಕ್ತಿ ಹೊಂದಿರುವುದಿಲ್ಲವೆಂದು ಪರಿಗಣಿಸಿ ವಿಶ್ವವಿದ್ಯಾಲಯದಿಂದ ಯಾವುದೇ ಹಿಂಬರಹ ನೀಡದೇ ಅಂತಹ ಅರ್ಜಿಗಳನ್ನು ಮುಕ್ತಾಯಗೊಳಿಸಲಾಗುವುದು ಮತ್ತು ನಿಯಮಾನುಸಾರ ಮುಂದಿನ ಕ್ರಮ ಜರುಗಿಸಲಾಗುವುದು.
18. ಮಹಾವಿದ್ಯಾಲಯದವರು ಬಿ.ಎ. ಮತ್ತು ಬಿ.ಎಸ್ಸಿ ಕೋರ್ಸಗಳಿಗೆ ಸಂಬಂಧಿಸಿದಂತೆ, ಪ್ರತಿ ಐಚ್ಛಿಕ ವಿಷಯಕ್ಕೆ ಕನಿಷ್ಠ 15 ವಿದ್ಯಾರ್ಥಿಗಳ ಪ್ರವೇಶಮಿತಿ ಇರತಕ್ಕದ್ದು. ಒಮ್ಮೆ ಐಚ್ಛಿಕ ವಿಷಯಗಳಗೆ ಹಾಗೂ ಹಿಂದಿನ ಶೈಕ್ಷಣಿಕ ಸಾಲಿಗೆ ಮಹಾವಿದ್ಯಾಲಯಕ್ಕೆ ಮಂಜೂರು ಮಾಡಲಾದ ಸಮೂಹವಾರು ಅಥವಾ ವಿಷಯವಾರು (ಬಿ.ಎ. ಹಾಗೂ ಬಿ.ಎಸ್ಸಿ ಕೋರ್ಸಗಳ) ಪ್ರವೇಶ ಮಿತಿಯನ್ನು ಯಾವುದೇ ಕಾರಣಕ್ಕೂ ಶೈಕ್ಷಣಿಕ ಅವಧಿಯ ಮದ್ಯದಲ್ಲಿ ಕಡಿಮೆಗೊಳಿಸಲು ಅಥವಾ ಅದೇ ಪ್ರವೇಶ ಮಿತಿಯನ್ನು ಮತ್ತೊಂದು ಐಚ್ಛಿಕ ವಿಷಯಕ್ಕೆ ವರ್ಗಾಯಿಸಲು ಅಥವಾ ಪರಸ್ಪರ ಹೊಂದಾಣಿಕೆ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ. ಐಚ್ಛಿಕ ವಿಷಯಗಳಿಗೆ ಪ್ರವೇಶ ಮಿತಿ ಹೆಚ್ಚಳ ಅಗತ್ಯವಾಗಿದ್ದಲ್ಲಿ, ಸಂಯೋಜನಾ ಅರ್ಜಿಯಲ್ಲಿ ಪ್ರವೇಶ ಮಿತಿ ಹೆಚ್ಚಳಕ್ಕಾಗಿ ನಮೂದಿಸಿ, ಮಂಜೂರಾತಿ ಪಡೆದು, ಪ್ರವೇಶ ಮಿತಿ ಹೆಚ್ಚಳ ಪಡೆದುಕೊಳ್ಳುವುದು ಮತ್ತು ಅಗತ್ಯತೆಗಿಂತ ಹೆಚ್ಚುವರಿಯಾಗಿ ಮಂಜೂರಾಗಿರುವ ಪ್ರವೇಶ ಮಿತಿ ಕಡಿತಗೊಳಿಸಲು ಮನವಿ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ.
19. ವಿಶ್ವವಿದ್ಯಾಲಯ ನಿಗದಿಪಡಿಸಿದ ಎಲ್ಲ ಘಟಕಗಳನ್ನು ರಚಿಸಿ, ಅವುಗಳಿಗೆ ಅಧಿಕಾರಿಗಳನ್ನು ನೇಮಿಸಿ, ಘಟಕಗಳ ವತಿಯಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ಕುರಿತಾಗಿ ದಾಖಲೆಗಳನ್ನು ಎಲ್ಲಾ ದಾಖಲೆಗಳನ್ನು ಸರಿಯಾಗಿ ಕಾಯ್ದುಕೊಳ್ಳತಕ್ಕದ್ದು ಹಾಗೂ ಸ್ಥಳೀಯ ತನಿಖಾ ಸಮಿತಿಯವರು ಕೋರಿದಲ್ಲಿ ಹಾಜರುಪಡಿಸುವುದು.
20. ಸಂಯೋಜನೆಯ ವಿಧಕ್ಕೆ ಅನುಗುಣವಾಗಿ ಹೊಂದಬೇಕಾದ ಅಂಕಗಳನ್ನು ಹಾಗೂ ಮಾನದಂಡಗಳನ್ನು ಹೊಂದಿರತಕ್ಕದ್ದು.

21. ವಿಶ್ವವಿದ್ಯಾಲಯದ ಅಡಿಯಲ್ಲಿ ಈಗಾಗಲೆ ಕೆಲ ಕೋರ್ಸಗಳಿಗೆ ಸಂಯೋಜನೆ ಪಡೆದು ಕಳೆದ ವರ್ಷಗಳಿಂದ ಸಂಯೋಜನಾ ಅರ್ಜಿ ಸಲ್ಲಿಸದೇ ಇರುವ ಮಹಾವಿದ್ಯಾಲಯದವರು/ಸಂಶೋಧನಾ ಕೇಂದ್ರಗಳು ಪ್ರಸ್ತುತ ಸಾಲಿನಲ್ಲಿ ಅರ್ಜಿ ಸಲ್ಲಿಸಲು ನಿರ್ಧರಿಸಿದ್ದಲ್ಲಿ ವಿಶ್ವವಿದ್ಯಾಲಯದ ನಿಯಮಾನುಸಾರ ಹಿಂದಿನ ಸಾಲಿನ ಸಂಯೋಜನೆ ಶುಲ್ಕ ಮತ್ತು ದಂಡದೊಂದಿಗೆ ಪಾವತಿಸಿದ ನಂತರವೇ ಪ್ರಸ್ತುತ ಸಾಲಿಗೆ (2023-24) ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

## ಸಂಯೋಜನೆಯ ವಿಧ ಹಾಗೂ ಕೋರ್ಸ್‌ವಾರು ಸೂಚನೆಗಳು

**I. ಹೊಸ ಮಹಾವಿದ್ಯಾಲಯ/ ಕೋರ್ಸ/ ವಿಷಯ/ ವೃತ್ತಿಪರ ಹಾಗೂ ಸ್ನಾತಕೋತ್ತರ ಕೋರ್ಸಗಳ ಪ್ರವೇಶ ಮಿತಿ ಹೆಚ್ಚಳ/ ಪ್ರಥಮ ಬಾರಿಗೆ ಶಾಶ್ವತ ಸಂಯೋಜನೆ:**

1. ಹೊಸ ಮಹಾವಿದ್ಯಾಲಯವನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸಂಸ್ಥೆ/ ಸಂಘ/ ಟ್ರಸ್ಟ್‌ಗಳ ಸರ್ಕಾರದ ನಿಯಮಾವಳಿಗಳ ಪ್ರಕಾರ ನೋಂದಾಯಿತವಾಗಿರತಕ್ಕದ್ದು ಮತ್ತು ನಿಯಮಾವಳಿಗಳನ್ನು/ ಬೈಲಾ ನಿಯಮಗಳನ್ನು ಹೊಂದಿರಬೇಕು.
2. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 384 ಯುಎನ್‌ಇ 2020. ದಿನಾಂಕ: 18-02-2022ರಂತೆ ಹೊಸ ಮಹಾವಿದ್ಯಾಲಯ/ ಕೋರ್ಸ/ ವಿಷಯ/ ವೃತ್ತಿಪರ ಹಾಗೂ ಸ್ನಾತಕೋತ್ತರ ಕೋರ್ಸಗಳ ಪ್ರವೇಶ ಮಿತಿ ಹೆಚ್ಚಳ/ ಪ್ರಥಮ ಬಾರಿಗೆ ಶಾಶ್ವತಯಂತಹ ಸರ್ಕಾರದ ಸಲ್ಲಿಕೆಯಾಗಬೇಕಾದ ಪ್ರಸ್ತಾವನೆಗಳಿಗೆ ಸಂಬಂಧಿಸಿ, ಮಹಾವಿದ್ಯಾಲಯದ ಭೂಮಿಯು ಕೃಷಿಯೇತರ ಭೂಮಿಯಾಗಿರತಕ್ಕದ್ದು ಹಾಗೂ ವಿವಾದರಹಿತ ಒಡೆತನವನ್ನು ಹೊಂದಿರುವ ಭೂಮಿಯಾಗಿರಬೇಕು ಮತ್ತು ಭವಿಷ್ಯದಲ್ಲಿ ಮಹಾವಿದ್ಯಾಲಯದ ಸ್ಥಳದ ಮಾಲಿಕತ್ವವನ್ನು ಅವಶ್ಯಕತೆಗನುಗುಣವಾಗಿ ವರ್ಗಾವಣೆ ಮಾಡುವಂತಹ ಸಂದರ್ಭದಲ್ಲಿ ಯಾವುದೇ ಗೊಂದಲಗಳುಂಟಾಗದ ಭೂಮಿಯಾಗಿರತಕ್ಕದ್ದು, ಸರ್ಕಾರದ ಮಾರ್ಗಸೂಚಿಯನ್ವಯ ಮಹಾವಿದ್ಯಾಲಯವನ್ನು ಆರಂಭಿಸಲು ಉದ್ಧೇಶಿಸಲಾಗಿರುವ ಸ್ಥಳವು **A.** ಮೆಗಾ ಸಿಟಿಯ ವ್ಯಾಪ್ತಿಯಲ್ಲಿದ್ದರೆ 0.5 ಎಕರೆ, BMRDA, **B.** ನಗರ ಪಾಲಿಕೆ, ಜಿಲ್ಲಾ ಕೇಂದ್ರದ ವ್ಯಾಪ್ತಿಯಲ್ಲಿದ್ದರೆ 1 ಎಕರೆ, **C.** ಪುರಸಭೆ ಹಾಗೂ ತಾಲೂಕು ಕೇಂದ್ರದ ವ್ಯಾಪ್ತಿಯಲ್ಲಿದ್ದರೆ 1.5 ಎಕರೆ ಹಾಗೂ **D.** ಇತರೆ ಗ್ರಾಮೀಣ ಸ್ಥಳವಾಗಿದ್ದರೆ 3 ಎಕರೆ ಭೂಮಿಯನ್ನು ಸಂಘ/ ಸಂಸ್ಥೆ/ ಟ್ರಸ್ಟ್ ಹೆಸರಿನಲ್ಲಿ ಹೊಂದಿರತಕ್ಕದ್ದು.

ಸದರಿ ಜಮೀನು ಆಯಾ ಸಂಸ್ಥೆ ಅಥವಾ ಮಹಾವಿದ್ಯಾಲಯದ ಹೆಸರಿನಲ್ಲಿಯೇ ಇದೆ ಎಂಬುದಕ್ಕೆ ಈ ಕೆಳಗಿನ ದಾಖಲೆಗಳನ್ನು ಒದಗಿಸತಕ್ಕದ್ದು

- ಸದರಿ ಜಮೀನಿನ ಪಹಣಿ ಅಥವಾ ಮುನಿಸಿಪಾಲಿಟಿ/ ಕಾರ್ಪೋರೇಷನ್‌ಗಳಿಂದ ಪಡೆದ ಇತ್ತೀಚಿನ ಖಾತಾ ನಕಲಿನ ದೃಢೀಕೃತ ಪ್ರತಿ

**ಅಥವಾ**

- ಸದರಿ ಜಮೀನು ಸಂಸ್ಥೆಯ/ ಕಾಲೇಜಿನ ಹೆಸರಿಗೆ ಪಡೆದುಕೊಂಡಿರುವ ಬಗ್ಗೆ ಸಬ್ ರಜಿಸ್ಟ್ರಾರ್ ಕಛೇರಿಯಲ್ಲಿ ನೋಂದಾಯಿತವಾಗಿರುವ **(ಎ)** ಕ್ರಯ ಪತ್ರ ಅಥವಾ **(ಬಿ)** 30 ವರ್ಷಗಳಿಗಿಂದ ಕಡಿಮೆ ಇಲ್ಲದ ಅವಧಿಯ ಲೀಸ್‌ಡೀಡ್ ಅಥವಾ **(ಸಿ)** ದಾನಪತ್ರ
- ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 218 ಯುಎನ್‌ಇ 2020. ದಿನಾಂಕ: 28-08-2020 ರಲ್ಲಿ ನಿರ್ದೇಶಿಸಿರುವಂತೆ ಕಡ್ಡಾಯವಾಗಿ National Building Code-2016 ರಂತೆ Fire Services Department ನಿಂದ ಅನುಪಾಲನಾ ಪ್ರಮಾಣ ಪತ್ರವನ್ನು ಹಾಗೂ ಕಟ್ಟಡ ಸುರಕ್ಷತೆಯ ಕುರಿತಾಗಿ ಲೋಕೋಪಯೋಗಿ ಇಲಾಖೆ ಅಥವಾ ಅಂತಹ ಸಕ್ಷಮ ಪ್ರಾಧಿಕಾರದಿಂದ ಅನುಪಾಲನಾ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಪಡೆದುಕೊಂಡಿರತಕ್ಕದ್ದು.
- ತರಗತಿ, ಕಛೇರಿ ಕಾರ್ಯಾಲಯ, ಗ್ರಂಥಾಲಯ, ಕುಡಿಯುವ ನೀಡಿನ ವ್ಯವಸ್ಥೆ ಶೌಚಾಲಯ ಸೇರಿದಂತೆ ಮಹಾವಿದ್ಯಾಲಯವನ್ನು ನಡೆಸಲು ಅಗತ್ಯವಿರುವ ಎಲ್ಲ ಮೂಲಭೂತ ಸೌಲಭ್ಯಗಳನ್ನು ಹೊಂದಿರುವ ಕಟ್ಟಡವನ್ನು ಹೊಂದಿರತಕ್ಕದ್ದು ಹಾಗೂ ಸೂಕ್ತ ಶೈಕ್ಷಣಿಕ ವಾತಾವಣವನ್ನು ಹೊಂದಿರತಕ್ಕದ್ದು. ಮುಂದುವರೆದು, ಪ್ರಾರಂಭಿಸಲು ಇಚ್ಛಿಸಿರುವ ಕೋರ್ಸಗಳಿಗೆ ಅನುಗುಣವಾಗಿ ವಿಜ್ಞಾನ/ ಗಣಕಯಂತ್ರ, ಸೇರಿದಂತೆ ಅಗತ್ಯವಾಗಿರುವ ಇನ್ನಿತರ ಪ್ರಯೋಗಾಲಯಗಳ ವ್ಯವಸ್ಥೆ ಹೊಂದಿರಬೇಕು ಹಾಗೂ ಪಠ್ಯಕ್ರಮದನ್ವಯ ಪ್ರಯೋಗಾಲಯಗಳ ಸಿದ್ಧತೆ ಮಾಡಿಕೊಂಡಿರಬೇಕು.

3. ಟ್ರಸ್ಟ್/ ಸಂಘ/ ಸಂಸ್ಥೆಯು ಮಹಾವಿದ್ಯಾಲಯವನ್ನು ಪ್ರಾರಂಭಿಸಲು ನಿಯಮಾವಳಿಯಂತೆ ಕಾಲೇಜಿಗೆ ಅರ್ಹ ಪ್ರಾಂಶುಪಾಲರನ್ನು ಮತ್ತು ಪ್ರಾರಂಭಿಸಲಿರುವ ಕೋರ್ಸುಗಳಿಗೆ ಸಂಬಂಧಿಸಿದಂತೆ ನಿಯಮಾವಳಿ ಪ್ರಕಾರ ಪೂರ್ಣಕಾಲಿಕ ಉಪನ್ಯಾಸಕರನ್ನು ಖಾಯಂ ನೆಲೆಯಲ್ಲಿ ನೇಮಕ ಮಾಡಿಕೊಳ್ಳಲು ಕಛೇರಿಯ ಅವಶ್ಯಕತೆಗೆ ತಕ್ಕಂತೆ ಅಧೀಕ್ಷಕರು, ಗುಮಾಸ್ತರು ಹಾಗೂ ಜವಾನರನ್ನು ನೇಮಕ ಮಾಡಿಕೊಳ್ಳಲು ಗುರುತಿಸಿಕೊಂಡಿರತಕ್ಕದ್ದು. ಸ್ನಾತಕೋತ್ತರ ಕೋರ್ಸಗಳನ್ನು ಪ್ರಾರಂಭಿಸುವ ಮಹಾವಿದ್ಯಾಲಯಗಳು, ಸಂಬಂಧಿಸಿದ ಸ್ನಾತಕ ಕೋರ್ಸನ್ನು ಆರಂಭಿಸಿ ಐದು ವರ್ಷಗಳು ಪೂರ್ಣಗೊಂಡಿರಬೇಕು ಮತ್ತು ಸದರಿ ಪದವಿ ಕೋರ್ಸಗಳನ್ನು ನಡೆಸುತ್ತಿರುವ ಮಹಾವಿದ್ಯಾಲಯದಲ್ಲಿಯೇ ಸ್ನಾತಕೋತ್ತರ ಕೋರ್ಸಗಳನ್ನು ಪ್ರಾರಂಭಿಸಲು ಉದ್ದೇಶಿಸಿರಬೇಕು. ಅಲ್ಲದೇ ಸ್ಥಳೀಯ ತನಿಖಾ ಸಮಿತಿಗಳು ವಿಧಿಸಿದ ಈ ಹಿಂದಿನ ಎಲ್ಲಾ ಷರತ್ತುಗಳನ್ನು ಸಂಪೂರ್ಣವಾಗಿ ಹಾಗೂ ಕಡ್ಡಾಯವಾಗಿ ಪೂರೈಸಿರಬೇಕು. ಹೀಗೆ ಪ್ರಾರಂಭಿಸಲು ಉದ್ದೇಶಿಸಿರುವ ಸ್ನಾತಕೋತ್ತರ ಕೋರ್ಸಗೆ ಸಂಬಂಧಿಸಿದಂತೆ ನಿಯಮಾವಳಿ ಪ್ರಕಾರ ಬೋಧಕ ಸಿಬ್ಬಂದಿಯನ್ನು ಹೊಂದಿರಬೇಕು. ಇವರುಗಳಲ್ಲಿ ಇಬ್ಬರು ಪಿಎಚ್.ಡಿ. ಪದವಿಯನ್ನು ಕಡ್ಡಾಯವಾಗಿ ಪಡೆದಿರಬೇಕು. ಸಂಶೋಧನೆ ಕಾರ್ಯಕ್ಕಾಗಿ ಪ್ರತ್ಯೇಕ ವ್ಯವಸ್ಥೆ ಅಂದರೆ ಸರ್ಕಾರದ ಶಿಕ್ಷಣ ಇಲಾಖೆಯ ಮಾರ್ಗಸೂಚಿಯ ಪತ್ರ ಸಂಖ್ಯೆ: 1) ಇಡಿ 99 ಯುಎನ್ಇ 2002 ದಿನಾಂಕ: 02-11-2002, 2) ಇಡಿ 107 ಯುಆರ್‌ಸಿ 2006 ದಿನಾಂಕ: 21-08-2006 ರ ಪತ್ರದಲ್ಲಿ ತಿಳಿಸಿರುವಂತೆ ಎಲ್ಲಾ ಮೂಲಭೂತ ಹಾಗೂ ಶೈಕ್ಷಣಿಕ ಸೌಲಭ್ಯ ಹೊಂದಿರುವ ಮಹಾವಿದ್ಯಾಲಯದವರು ಸ್ನಾತಕೋತ್ತರ ಕೋರ್ಸಗಳನ್ನು ಪ್ರಾರಂಭಿಸಲು ಅರ್ಜಿಯನ್ನು ಸಲ್ಲಿಸಬೇಕು.

4. ಹೊಸದಾಗಿ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಲು ಉದ್ಧೇಶಿಸಿರುವ ಸಂಸ್ಥೆ/ ಸಂಘ/ ಟ್ರಸ್ಟ್‌ಗಳು ಉದ್ದೇಶಿತ ಮಹಾವಿದ್ಯಾಲಯವನ್ನು ನಡೆಸಲು ವಿಶ್ವವಿದ್ಯಾಲಯ/ ಸರ್ಕಾರ/ ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ/ ಎ.ಐ.ಸಿ.ಟಿ.ಇ./ ಎನ್.ಸಿ.ಟಿ.ಇ./ ಇತ್ಯಾದಿ ಸಂಬಂಧಿಸಿದ ಪ್ರಾಧಿಕಾರಗಳ ನಿಯಮಾವಳಿಗಳಂತೆ ಎಲ್ಲಾ ಮೂಲಭೂತ ಹಾಗೂ ಶೈಕ್ಷಣಿಕ ಸೌಲಭ್ಯಗಳನ್ನು ಹೊಂದಿರತಕ್ಕದ್ದು.

5. ಸರ್ಕಾರದಿಂದ ಕೋರ್ಸ ಮಂಜೂರಾತಿ ತಕ್ಷಣವೇ ವಿಶ್ವವಿದ್ಯಾಲಯದ ಸ್ಥಳೀಯ ತನಿಖಾ ಸಮಿತಿಯ ಷರತ್ತುಗಳನ್ನು ಪಾಲಿಸಿ, ವಿಶ್ವವಿದ್ಯಾಲಯಕ್ಕೆ ಭರಿಸಬೇಕಾದ ಠೇವಣಿಯನ್ನು ಭರಿಸಿ, ವಿಶ್ವವಿದ್ಯಾಲಯದಿಂದ ಸಂಯೋಜನೆ ಅಧಿಸೂಚನೆ ಪತ್ರವನ್ನು ಪಡೆದ ನಂತರವಷ್ಟೇ ಪ್ರವೇಶ ಪ್ರಕ್ರಿಯೆಯನ್ನು ಪ್ರಾರಂಭಿಸತಕ್ಕದ್ದು.

**II. ಮುಂದುವರಿಕೆ ಹಾಗೂ ವಿಸ್ತರಣೆ ಸಂಯೋಜನೆ:**

1. 2021-22ನೇ ಸಾಲಿನಲ್ಲಿ ಹೊಸ ಸ್ನಾತಕ ಕೋರ್ಸ ಅಥವಾ ಹೊಸ ಸ್ನಾತಕ ಮಹಾವಿದ್ಯಾಲಯ ಆರಂಭಿಸಿದ್ದಲ್ಲಿ ಒಂದನೇಯ ವರ್ಷದ ಮುಂದುವರಿಕೆಗೆ ಮುಂದುವರಿಕೆ ಶುಲ್ಕ ಮತ್ತು ಎರಡು ಹಾಗೂ ಮೂರನೇಯ ವರ್ಷಗಳ ವಿಸ್ತರಣೆಗಾಗಿ ವಿಸ್ತರಣೆ ಶುಲ್ಕ ಭರಿಸಬೇಕಾಗುತ್ತದೆ. ಅದೇ ರೀತಿಯಾಗಿ ಹಾಗೂ 2022-23ನೇ ಸಾಲಿನಲ್ಲಿ ಹೊಸ ಸ್ನಾತಕ ಕೋರ್ಸ ಅಥವಾ ಹೊಸ ಸ್ನಾತಕ ಮಹಾವಿದ್ಯಾಲಯ ಆರಂಭಿಸಿದ್ದಲ್ಲಿ ಕೋರ್ಸನ ಒಂದನೇಯ ವರ್ಷದ ಮುಂದುವರಿಕೆಗೆ ಮುಂದುವರಿಕೆ ಶುಲ್ಕ ಮತ್ತು ಕೋರ್ಸನ ಎರಡನೇಯ ವರ್ಷದ ವಿಸ್ತರಣೆಗಾಗಿ ವಿಸ್ತರಣೆ ಶುಲ್ಕ ಭರಿಸಬೇಕಾಗುತ್ತದೆ.
2. ಸಂಯೋಜನಾ ಅರ್ಜಿಯೊಂದಿಗೆ ಕನಿಷ್ಠ ಐದು ವರ್ಷಗಳ ಸಂಯೋಜನಾ ಅಧಿಸೂಚನೆಯ ಪ್ರತಿಗಳನ್ನು ಮತ್ತು ಪ್ರವೇಶ ಮಿತಿ ಹೆಚ್ಚಳದ ಪ್ರತಿಗಳನ್ನು ಕಡ್ಡಾಯವಾಗಿ ಲಗತ್ತಿಸಬೇಕು.
3. ಬಿ.ಎ. ಮತ್ತು ಬಿ.ಎಸ್ಸಿ ಕೋರ್ಸಗಳಿಗೆ ವಿಶ್ವವಿದ್ಯಾಲಯವು ವಿಷಯವಾರು ನಿಗದಿಪಡಿಸಿರುವ ಪ್ರವೇಶ ಮಿತಿಯಂತೆ ನಿಗದಿತ **ಅನುಬಂಧಗಳಲ್ಲಿ** ಮುಂದುವರಿಕೆ/ ವಿಸ್ತರಣೆ ಕೋರತಕ್ಕದ್ದು.

**III. ಶಾಶ್ವತ ಸಂಯೋಜನೆ:**

1. ಸತತವಾಗಿ ಐದು ವರ್ಷಗಳ ತಾತ್ಕಾಲಿಕ ಸಂಯೋಜನೆ ಪೂರ್ಣಗೊಂಡಿರುವ ಕೋರ್ಸಗಳಿಗೆ ಮತ್ತು ಹಿಂದಿನ ಐದು ವರ್ಷಗಳ ತನಿಖಾ ಸಮಿತಿಯವರು ವಿಧಿಸಿರುವ ಷರತ್ತುಗಳನ್ನು ಸಂಪೂರ್ಣವಾಗಿ ಪಾಲಿಸಿದ ಮಹಾವಿದ್ಯಾಲಯಗಳು ತಮ್ಮ ಕೋರ್ಸಗಳಿಗೆ/ ವಿಷಯಗಳಿಗೆ ಈ ಕೆಳಗಿನ ಅರ್ಹತೆಗಳನ್ನು ಹೊಂದಿದ್ದಲ್ಲಿ ಮಾತ್ರ ಶಾಶ್ವತ ಸಂಯೋಜನೆಗೆ ಅರ್ಜಿ ಸಲ್ಲಿಸಬಹುದಾಗಿದೆ.
2. ಹೊಸ ಮಹಾವಿದ್ಯಾಲಯ/ ಕೋರ್ಸ/ ವಿಷಯ/ ವೃತ್ತಿಪರ ಹಾಗೂ ಸ್ನಾತಕೋತ್ತರ ಕೋರ್ಸಗಳ ಪ್ರವೇಶ ಮಿತಿ ಹೆಚ್ಚಳ/ ಪ್ರಥಮ ಬಾರಿಗೆ ಶಾಶ್ವತ ಸಂಯೋಜನೆಯ ಭಾಗದ ಕಂಡಿಕೆ 2ರಲ್ಲಿ ಕಾಣಿಸಿದ ಷರತ್ತುಗಳು ಹೊಸ (ಪ್ರಥಮ) ಶಾಶ್ವತ ಸಂಯೋಜನೆಗೂ ಅನ್ವಯವಾಗುತ್ತವೆ.
3. ಸರಕಾರದ ಸುತ್ತೋಲೆ ಸಂಖ್ಯೆ: ಇಡಿ 119 ಯುಆರ್‌ಸಿ 2021. ದಿನಾಂಕ: 23-07-2021ರನ್ವಯ ಶಾಶ್ವತ ಸಂಯೋಜನೆಗಾಗಿ ನ್ಯಾಕ್ ಮಾನ್ಯತೆ ಅಗತ್ಯತೆ ಇರುವುದಿಲ್ಲ.
4. ಮಹಾವಿದ್ಯಾಲಯದ ಆಡಳಿತ ಮಂಡಳಿಯು ಸರ್ಕಾರದ ನೋಂದಣಿ ಕಾಯ್ದೆಗಳಂತೆ ನೋಂದಣಿಯಾಗಿದ್ದು ನಿಯಾಮಾನುಸಾರವಾಗಿ ಕಾಲಕಾಲಕ್ಕೆ ನೋಂದಣಿಯನ್ನು ನವೀಕರಣ ಮಾಡಿಕೊಂಡಿರಬೇಕು ಹಾಗೂ ಕಾಲಕಾಲಕ್ಕೆ ಆಡಳಿತ ಮಂಡಳಿಯ ಸಭೆಗಳನ್ನು ನಡೆಸಿದ್ದು ಸದರಿ ಸಭೆಗಳ ನಡಾವಳಿಗಳ ದಾಖಲೆಗಳನ್ನು ಒದಗಿಸತಕ್ಕದ್ದು.
5. ತಮ್ಮ ಮಹಾವಿದ್ಯಾಲಯದ ಕೋರ್ಸಗಳಿಗೆ/ ವಿಷಯಗಳಿಗೆ ಯು.ಜಿ.ಸಿ. ನಿಯಮದಂತೆ ಈಗಾಗಲೇ 2(ಎಫ್) ಮಾನ್ಯತೆ ಪಡೆದಿರಬೇಕು.
6. ಮಹಾವಿದ್ಯಾಲಯಗಳು ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ/ ಸರ್ಕಾರವು ಕಾಲಕಾಲಕ್ಕೆ ನಿಗದಿಗೊಳಿಸುವ ನಿಯಮಾವಳಿಗಳಂತೆ ಸ್ವಂತ ಭೂಮಿ, ಕಟ್ಟಡ, ಬೋಧಕ ಸಿಬ್ಬಂದಿ ಹಾಗೂ ಇತರೆ ಎಲ್ಲಾ ಮೂಲಭೂತ ಹಾಗೂ ಶೈಕ್ಷಣಿಕ ಸೌಲಭ್ಯಗಳನ್ನು ಹೊಂದಿರಬೇಕು.
7. ಶಾಶ್ವತ ಸಂಯೋಜನೆಗಾಗಿ ಅರ್ಜಿ ಸಲ್ಲಿಸುವ ಮಹಾವಿದ್ಯಾಲಯದವರು ಅರ್ಜಿಗಳೊಂದಿಗೆ, ಕಳೆದ 5 (ಐದು) ವರ್ಷಗಳ ಮುಂದುವರಿಕೆ ಸಂಯೋಜನಾ ಅಧಿಸೂಚನೆಗಳು, ವಿದ್ಯಾರ್ಥಿಗಳ ಪ್ರವೇಶಾತಿ, ಪರೀಕ್ಷಾ ಫಲಿತಾಂಶಗಳು ಹಾಗೂ ಸಂಸ್ಥೆಯ/ ಮಹಾವಿದ್ಯಾಲಯದ ಲೆಕ್ಕ ಪರಿಶೋಧಕರಿಂದ ದೃಢಿಕರಿಸಿದ ಲೆಕ್ಕ ಪರಿಶೋಧನಾ ವರದಿಗಳು ಹಾಗೂ ಸ್ಥಳೀಯ ತನಿಖಾ ಸಮಿತಿಯ ಷರತ್ತುಗಳನ್ನು ಸಂಪೂರ್ಣವಾಗಿ ಪಾಲಿಸಿರುವ ಬಗ್ಗೆ ಅನುಪಾಲನಾ ವರದಿಗಳನ್ನು ಪೂರ್ಣಗೊಳಿಸಿ ದೃಢೀಕರಿಸಿ ಒದಗಿಸಬೇಕು.
8. ಮಹಾವಿದ್ಯಾಲಯವು ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ/ ಸರ್ಕಾರದ ನಿಯಮಾನುಸಾರವಾಗಿ ಕನಿಷ್ಠ 50% ರಷ್ಟು ಖಾಯಂ ಆಗಿ ನೇಮಕವಾದ ಸಿಬ್ಬಂದಿಗಳನ್ನು ಹೊಂದಿರಬೇಕು ಹಾಗೂ ನಿಯಮಗಳಿಗೆ ಅನುಗುಣವಾಗಿ ವೇತನ, ಪಿ.ಎಫ್, ಗ್ರಾಚುಯಿಟಿ, ಇ.ಎಸ್.ಐ. ಹಾಗೂ ಇನ್ನಿತರ ಸೌಲಭ್ಯಗಳನ್ನು ನೀಡಿರಬೇಕು.
9. ಹೀಗೆ ಎಲ್ಲಾ ಷರತ್ತುಗಳನ್ನು/ ನಿಯಮಗಳನ್ನು ಪಾಲಿಸಿದ ಮಹಾವಿದ್ಯಾಲಯಗಳಿಗೆ ನೀಡಬೇಕಾದ ಶಾಶ್ವತ ಸಂಯೋಜನೆಯು ವಿದ್ಯಾವಿಷಯಕ್ ಪರಿಷತ್ ಸಭೆ, ಸಿಂಡಿಕೇಟ್ ಸಭೆ ಹಾಗೂ ಸರ್ಕಾರದ ಅನುಮೋದನೆಗಳ ಷರತ್ತಿಗೆ ಹಾಗೂ ಕಾಲಕಾಲಕ್ಕೆ ಯುಜಿಸಿ/ ಸರ್ಕಾರದವರು ಹೊರಡಿಸುವ ಆದೇಶ/ ತಿದ್ದುಪಡಿಗಳ ಷರತ್ತುಗಳಿಗೆ ಒಳಪಟ್ಟಿರುತ್ತದೆ

**IV. ಶಾಶ್ವತ ಸಂಯೋಜನೆ ನವೀಕರಣ:**

1. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000ರ ಪ್ರಕರಣ ಅಧಿನಿಯಮ 62(3) ರ ಮೇರೆಗೆ ಶಾಶ್ವತ ಸಂಯೋಜನೆ ಪಡೆದ ಮಹಾವಿದ್ಯಾಲಯಗಳ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಪ್ರಕಾರ್ಯಗಳನ್ನು ವಿಶ್ವವಿದ್ಯಾಲಯವು ಪರಿಶೀಲಿಸಬೇಕಾಗುವುದರಿಂದ ಶಾಶ್ವತ ಸಂಯೋಜನೆ ಪೂರ್ಣಗೊಳ್ಳುವ ಮೊದಲು ವಿಶ್ವವಿದ್ಯಾಲಯವು ಸಂಯೋಜನೆಗಾಗಿ ಅಧಿಸೂಚನೆ ಪ್ರಕಟಿಸಿದಾಗ ಕಡ್ಡಾಯವಾಗಿ ಶಾಶ್ವತ ಸಂಯೋಜನೆ ನವೀಕರಣಕ್ಕಾಗಿ ಸಂಬಂಧಿಸಿದ ಶುಲ್ಕಗಳನ್ನು ಭರಿಸಿ ಅರ್ಜಿಗಳನ್ನು ಸಲ್ಲಿಸಬೇಕಾಗುತ್ತದೆ.
2. ಶಾಶ್ವತ ಸಂಯೋಜನೆ ನವೀಕರಣಕ್ಕಾಗಿ ಹೊಸ ಶಾಶ್ವತ ಸಂಯೋಜನೆಗೆ ನಿಗದಿಪಡಿಸಲಾಗಿರುವ ಎಲ್ಲಾ ನಿಯಮಗಳೂ ಅನ್ವಯವಾಗುತ್ತವೆ.
3. ಮಹಾವಿದ್ಯಾಲಯಗಳು ತಮ್ಮ ಶಾಶ್ವತ ಸಂಯೋಜನೆಯು ಪೂರ್ಣಗೊಳ್ಳುವ ಒಂದು ವರ್ಷ ಮೊದಲೇ ಶಾಶ್ವತ ಸಂಯೋಜನಾ ನವೀಕರಣ ಅರ್ಜಿಯನ್ನು ಆನ್‌ಲೈನ್ ಮೂಲಕ ಸಂಬಂಧಿಸಿದ ಶುಲ್ಕಗಳೊಂದಿಗೆ ಭರಿಸಿ, ಅರ್ಜಿ ಸಲ್ಲಿಸತಕ್ಕದ್ದು. (ಉದಾ: ಮಹಾವಿದ್ಯಾಲಯವು 2018-19 ರಿಂದ 2022-23ರ ವರೆಗೆ ಶಾಶ್ವತ ಸಂಯೋಜನೆ/ ಶಾಶ್ವತ ಸಂಯೋಜನೆ ನವೀಕರಣ ಪಡೆದಿದ್ದಲ್ಲಿ, ವಿಶ್ವವಿದ್ಯಾಲಯವು 2023-24ನೇ ಸಾಲಿನ ಸಂಯೋಜನೆಗಾಗಿ ಅಧಿಸೂಚನೆ ಪ್ರಕಟಿಸಿರುವಾಗ ಅಂತಹ ಮಹಾವಿದ್ಯಾಲಯವು ಶಾಶ್ವತ ಸಂಯೋಜನೆ ನವೀಕರಣಕ್ಕಾಗಿ ಕಡ್ಡಾಯವಾಗಿ ಅರ್ಜಿ ಸಲ್ಲಿಸುವುದು).
4. ಶಾಶ್ವತ ಸಂಯೋಜನೆ ನವೀಕರಣಕ್ಕಾಗಿ ಮಹಾವಿದ್ಯಾಲಯಗಳು ಹಿಂದಿನ ಸ್ಥಳೀಯ ತನಿಖಾ ಸಮಿತಿಯು ವಿಧಿಸಿದ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಿರಬೇಕು.
5. ಶಾಶ್ವತ ಸಂಯೋಜನೆ ನವೀಕರಣಕ್ಕಾಗಿ ಮಹಾವಿದ್ಯಾಲಯದವರು ನಿಗದಿತ ಸಮಯಕ್ಕೆ ಅರ್ಜಿ ಸಲ್ಲಿಸದಿದ್ದಲ್ಲಿ ಮುಂದಾಗುವ ಎಲ್ಲ ಆಗು-ಹೋಗುಗಳಿಗೆ ಮಹಾವಿದ್ಯಾಲಯದವರೇ ಜವಾಬ್ದಾರರಾಗಿರುತ್ತಾರೆ.

**VII. ಸರ್ಟಿಫಿಕೇಟ್ ಕೋರ್ಸ ಇನ್ ಯೋಗಾ ಸ್ಟಡೀಸ್ ಮತ್ತು ಪಿ.ಜಿ. ಡಿಪ್ಲೋಮಾ ಇನ್ ಯೋಗಾ ಸ್ಟಡೀಸ್:**

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ಸರ್ಟಿಫಿಕೇಟ್ ಕೋರ್ಸ ಇನ್ ಯೋಗಾ ಸ್ಟಡಿಸ್ ಮತ್ತು ಪಿ. ಜಿ. ಡಿಪ್ಲೋಮಾ ಇನ್ ಯೋಗಾ ಸ್ಟಡಿಸ್ ಕೋರ್ಸನ್ನು ಪ್ರಾರಂಭಿಸಲು ಇಚಿಸ್ಸುವ ಮಹಾವಿದ್ಯಾಲಯಗಳಿಗೆ ಠೇವಣಿ ರಹಿತವಾಗಿ ಹಾಗೂ ಹೊಸ ಸಂಯೋಜನಾ ಶುಲ್ಕದಲ್ಲಿ 50% ರಿಯಾಯತಿಯೊಂದಿಗೆ ಸಂಯೋಜನೆ ನೀಡಲು ದಿನಾಂಕ: 07-07-2017ರಂದು ಸಿಂಡಿಕೇಟ್ ಸಭೆಯು ನಿರ್ಧರಿಸಿದೆ. ಆದ್ದರಿಂದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬೆಳಗಾವಿ ಮತ್ತು ವಿಜಯಪುರ ಜಿಲ್ಲೆಯಲ್ಲಿಯ ಅಸ್ತಿತ್ವದಲ್ಲಿರುವ ಮಹಾವಿದ್ಯಾಲಯದವರು ಅಥವಾ ಸರ್ಕಾರದ ನಿಯಮಾವಳಿಯಂತೆ ಸಂಘ/ ಸಂಸ್ಥೆ/ ಟ್ರಸ್ಟ್ ಹೊಂದಿದವರು ಸರ್ಟಿಫಿಕೇಟ್ ಕೋರ್ಸ ಇನ್ ಯೋಗಾ ಸ್ಟಡಿಸ್ ಮತ್ತು ಪಿ. ಜಿ. ಡಿಪ್ಲೋಮಾ ಇನ್ ಯೋಗಾ ಸ್ಟಡೀಸ್ ಪ್ರಾರಂಭಿಸಲು ಸಂಯೋಜಿತ ಮಹಾವಿದ್ಯಾಲಯಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮಹಾವಿದ್ಯಾಲಯವು ಮೂಲಭೂತ ಮತ್ತು ಶೈಕ್ಷಣಿಕ ಸೌಲಭ್ಯಗಳ ಜೊತೆಗೆ ಅರ್ಹ ಶಿಕ್ಷರನ್ನು ಅಂದರೆ ಎಂ.ಎ. ಯೋಗ ಪದವಿ ಹೊಂದಿದ ಶಿಕ್ಷರನ್ನು ನೇಮಕ ಹೊಂದಿರುವ ಹಾಗೂ ಯೋಗಾ ಪ್ರಯೋಗಾಲಯ ಹೊಂದಿದಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

**VIII. ಸಂಶೋಧನಾ ಕೇಂದ್ರದ ಮಾನ್ಯತೆ/ ಮಾನ್ಯತೆ ನವೀಕರಣ:**

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿಯ ಸ್ನಾತಕೋತ್ತರ ಕೋರ್ಸ ಸಂಯೋಜನೆ ಹೊಂದಿರುವಂತಹ ಮಹಾವಿದ್ಯಾಲಯದವರು ಸಂಶೋಧನಾ ಕೇಂದ್ರದ ಸ್ಥಾನಮಾನ ಅರ್ಜಿ ಸಲ್ಲಿಸಬಹುದಾಗಿದ್ದು ಮಹಾವಿದ್ಯಾಲಯಗಳು ಈ ಕೆಳಕಾಣಿಸಿದ ಅರ್ಹತಾ ಮಾನದಂಡಗಳನ್ನು ಪೂರೈಸಿರಬೇಕು.

1. ಮಹಾವಿದ್ಯಾಲಯವನ್ನು ಸರ್ಕಾರ/ ವಿಶ್ವವಿದ್ಯಾಲಯ/ ಯುಜಿಸಿ ಮತ್ತು ಇನ್ನಿತರ ಸಂಬಂಧಿತ ಪ್ರಾಧಿಕಾರದ ನಿಯಮಾವಳಿಯಂತೆ ಪ್ರಾರಂಭಿಸಿರಬೇಕು.
2. ಸ್ನಾತಕೋತ್ತರ ಕೋರ್ಸನ್ನು ಪ್ರಾರಂಭಿಸಿ ಕಡ್ಡಾಯವಾಗಿ ಐದು ವರ್ಷಗಳನ್ನು ಪೂರೈಸಿರಬೇಕು.
3. ಮಹಾವಿದ್ಯಾಲಯವು ಕನಿಷ್ಠ "ಬಿ" ಗ್ರೇಡ್ ನ್ಯಾಕ್ ಮಾನ್ಯತೆಯನ್ನು ಪಡೆದಿರಬೇಕು.
4. ಮಹಾವಿದ್ಯಾಲಯವು ಹೊಂದಿರುವ ಸ್ನಾತಕೋತ್ತರ ಕೋರ್ಸ/ ವಿಷಯಕ್ಕೆ ಮಾತ್ರ ಸಂಶೋಧನಾ ಕೇಂದ್ರದ ಮಾನ್ಯತೆಗಾಗಿ ಅರ್ಜಿ ಸಲ್ಲಿಸಬಹುದು.
5. ಸಂಶೋಧನಾ ಕೇಂದ್ರ ಪಡೆಯವುದಕ್ಕಾಗಿ ಅಗತ್ಯವಿರುವ ಪಿ.ಎಚ್.ಡಿ. ಪದವಿಯನ್ನು ಹೊಂದಿರುವ ಮತ್ತು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪಿಎಚ್.ಡಿ. ನಿಯಮಾವಳಿಗಳನ್ವಯ ಮಾರ್ಗದರ್ಶಕರಾಗಲು (Guideship) ಅರ್ಹತೆಯನ್ನು ಹೊಂದಿರುವ ಬೋಧಕ ಸಿಬ್ಬಂದಿಯನ್ನು ಕಡ್ಡಾಯವಾಗಿ ಹೊಂದಿರಬೇಕು.
6. ಸಂಶೋಧನಾ ಕೇಂದ್ರಕ್ಕೆ ಅನ್ವವಾಗುವಂತೆ ಸುಸಜ್ಜಿತ ಗ್ರಂಥಾಲಯದ ಕಟ್ಟಡ ಹೊಂದಿ, ಗ್ರಂಥಾಲಯದಲ್ಲಿ ಸಂಶೋಧನಾ ಕೇಂದ್ರಕ್ಕೆ ಬೇಕಾಗುವಷ್ಟು ಪುಸ್ತಕಗಳನ್ನು ಮತ್ತು ಜರ್ನಲ್‌ಗಳನ್ನು ಹೊಂದಿರಬೇಕು ಮತ್ತು ಗಣಕಯಂತ್ರ ಪ್ರಯೋಗಾಲಯ, ಅಂತರ್ಜಾಲದ ವ್ಯವಸ್ಥೆ, e-learning ವ್ಯವಸ್ಥೆಯ ಜೊತೆಗೆ ಸುಸಜ್ಜಿತ ಪ್ರಯೋಗಾಲಯದಂತಹ ಇನ್ನಿತರ ಎಲ್ಲ ಮೂಲಭೂತ ಮತ್ತು ಶೈಕ್ಷಣಿಕ ಸೌಕರ್ಯಗಳನ್ನು ಕಡ್ಡಾಯವಾಗಿ ಹೊಂದಿರಬೇಕು.
7. ಸಂಶೋಧನಾ ಕೇಂದ್ರದ ಮಾನ್ಯತೆ ಪಡೆಯುವುದಕ್ಕಾಗಿ ಮತ್ತು ಮುನ್ನಡೆಸಿಕೊಂಡು ಹೋಗುವುದಕ್ಕಾಗಿ ಸಂಸ್ಥೆಯ ಆಯವ್ಯಯದಲ್ಲಿ ಹಣವನ್ನು ಕಾಯ್ದಿರಿಸಿ ಸೂಕ್ತ ಹಣಕಾಸಿನ ವ್ಯವಸ್ಥೆ ಮಾಡಿಕೊಂಡಿರಬೇಕು.
8. ಸಂಶೋಧನಾ ಕೇಂದ್ರ ಪಡೆಯುವುದಕ್ಕಾಗಿ ಪ್ರತಿ ವಿಷಯಕ್ಕೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಬೇಕು.
9. ಸಂಶೋಧನಾ ಕೇಂದ್ರದ ಮಾನ್ಯತೆ 2021-22ನೇ ಸಾಲಿಗೆ ಮಕ್ತಾಯಗೊಳ್ಳುತ್ತಿದ್ದರೆ ಅಂತಹ ಸಂಶೋಧನಾ ಕೇಂದ್ರಗಳ ಮಾನ್ಯತೆ ನವೀಕರಣಕ್ಕಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

ಸಂಶೋಧನಾ ಕೇಂದ್ರದ ಮಾನ್ಯತೆಗಾಗಿ/ ಮಾನ್ಯತೆ ನವೀಕರಣಕ್ಕಾಗಿ ಸಂಯೋಜಿತ ಮಹಾವಿದ್ಯಾಲಯ/ ಸಂಶೋಧನಾ ಕೇಂದ್ರಗಳು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣದಲ್ಲಿ (www.rcub.ac.in) ಲಭ್ಯವಿರುವ ನಿಗದಿತ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು ಮಾಹಿತಿಯನ್ನು ಭರ್ತಿಮಾಡಿ, ಮಾಹಿತಿಗೆ ಸಂಬಂಧಿಸಿದ ಎಲ್ಲಾ ದೃಢೀಕೃತ ದಾಖಲೆಗಳನ್ನು ಲಗತ್ತಿಸಿ, ವಿಶ್ವವಿದ್ಯಾಲಯವು ನಿಗದಿಪಡಿಸಿರುವ ಶುಲ್ಕವನ್ನು ಭರಿಸಿ, ಭೌತಿಕವಾಗಿ ವಿಶ್ವವಿದ್ಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಕಾಲೇಜು ಅಭಿವೃದ್ಧಿ ಮಂಡಳಿ ವಿಭಾಗವನ್ನು ಸಂಪರ್ಕಿಸಬಹುದಾಗಿದೆ.

**ವಿಶೇಷ ಸೂಚನೆ:** ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿಯ ಮಹಾವಿದ್ಯಾಲಯಗಳು ಯು.ಜಿ.ಸಿ. ನಿಯಮಾವಳಿಯನ್ವಯ ವಿವಿಧ ಯೋಜನೆಗಳ ಅಡಿಯಲ್ಲಿ ಧನ ಸಹಾಯದ ಪ್ರಯೋಜನ ಪಡೆಯುವುದಕ್ಕಾಗಿ ಅಗತ್ಯ ಶೈಕ್ಷಣಿಕ ಮತ್ತು ಮೂಲಭೂತ ಸೌಲಭ್ಯಗಳನ್ನು ಹೊಂದಿರುವ ಅರ್ಹ ಮಹಾವಿದ್ಯಾಲಯಗಳು ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗ ಇವರ ಅಧಿಕೃತ ವೆಬ್‌ಸೈಟ್‌ನಲ್ಲಿ ನೀಡಲಾಗಿರುವ ಆದೇಶ, ಸುತ್ತೋಲೆ ಮತ್ತು ಮಾರ್ಗಸೂಚಿಗಳನ್ನು ಪರಿಶೀಲಿಸಿ ಮುಂದಿನ ಕ್ರಮ ಜರುಗಿಸುವಂತೆ ಈ ಮೂಲಕ ತಿಳಿಸಲಾಗಿದೆ.

**ಸಹಿ/-**

**ಕುಲಸಚಿವರು**